**ದಿನಾಂಕಃ 03-02-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಪಿ.ಎಸ್.ಸಿ. ವಕೀಲರಿಂದಃ**

1. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದು, ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಅಸುಂಡಿ ಗ್ರಾಮದಲ್ಲಿ ವಾಸವಾಗಿದ್ದು, ನಾನು ಮತ್ತು 5 ನೇ ಪ್ರತಿವಾದಿ ಒಟ್ಟಿಗೆ ಇರುತ್ತೇವೆ ಎಂದರೆ ಸಾಕ್ಷಿ ನಾನು, ನನ್ನ ಹೆಂಡತಿ ಹಾಗೂ ಮಕ್ಕಳು ಒಟ್ಟಿಗೆ ಅಸುಂಡಿ ಗ್ರಾಮದಲ್ಲಿ ವಾಸವಾಗಿರುತ್ತೇವೆ ಅಂತಾ ನುಡಿಯುತ್ತಾರೆ. ನನಗೆ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಮಕ್ಕಳೆಲ್ಲರ ಮದುವೆಯಾಗಿದ್ದು, ಅವರವರ ಕುಟುಂಬದವರೊಂದಿಗೆ ಪ್ರತ್ಯೇಕವಾಗಿದ್ದಾರೆ ಎಂದರೆ ಸಾಕ್ಷಿ ಹೆಣ್ಣು ಮಕ್ಕಳು ತಮ್ಮ ಗಂಡನ ಮನೆಯಲ್ಲಿರುತ್ತಾರೆ ಮತ್ತು ಗಂಡು ಮಕ್ಕಳು ಮತ್ತು ಮೊಮ್ಮಕ್ಕಳು ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿ ರಾಣೆಬೆನ್ನೂರಿನಲ್ಲಿ ವಾಸವಾಗಿದ್ದು, 5 ನೇ ಪ್ರತಿವಾದಿ ನನ್ನೊಂದಿಗೆ ಅಸುಂಡಿ ಗ್ರಾಮದಲ್ಲಿ ವಾಸವಾಗಿದ್ದು, 4 ನೇ ಪ್ರತಿವಾದಿ ಧಾರವಾಡದಲ್ಲಿ ವಾಸವಾಗಿದ್ದಾನೆ. ಮದುವೆ ಕಾಲಕ್ಕೆ ಹೆಣ್ಣು ಮಕ್ಕಳಿಗೆ ಬಾಂಡೆ ಸಾಮಾನು, ವರದಕ್ಷಿಣೆ ಹಾಗೂ ಬಂಗಾರ ಕೊಟ್ಟಿರುತ್ತೇನ ಎಂದರೆ ಸಾಕ್ಷಿ ಆಗಿನ ಪರಿಸ್ಥಿತಿಗೆ ತಕ್ಕಂತೆ ಸ್ವಲ್ಪ ಮಟ್ಟಿಗೆ ಕೊಟ್ಟಿರುತ್ತೇನೆ ಅಂತಾ ನುಡಿಯುತ್ತಾರೆ.

2. 4 ನೇ ಪ್ರತಿವಾದಿ 1991 ರಲ್ಲಿ ಡಿಪ್ಲೋಮಾ ಮುಗಿಸಿಕೊಂಡು ನೌಕರಿಗೆ ಹೋಗಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿ ಸುಮಾರು 30 ವರ್ಷಗಳಿಂದ ಸುಮಾರು 8-10 ಬೇರೆ ಬೇರೆ ಕಂಪನಿಗಳಲ್ಲಿ, ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡುತ್ತಾ

ಬಂದಿದ್ದಾರೆ ಎಂದರೆ ಸರಿ. ಈಗ 4 ನೇ ಪ್ರತಿವಾದಿಯು ಮನೆ ಧಾರವಾಡದಲ್ಲಿ ಮಾಡಿದ್ದು, ಸುಧಾ ಇಂಫ್ರಾಸ್ಟ್ರಕ್ಚರ ಕಂಪನಿ ಮಂಗಳೂರಿನಲ್ಲಿ ಇಂಜನೀಯರ್ ಅಂತಾ ಇದ್ದು, ಗುಲಬರ್ಗಾದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಕೆಲಸ ಮಾಡುತ್ತಿರುವುದು ನಿಜ, ಆದರೆ ಎಲ್ಲೆಲ್ಲಿ ಅಂತಾ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ.

3. ನನಗೆ ಅಸುಂಡಿ ಗ್ರಾಮದಲ್ಲಿ 2 ಎಕರೆ 30 ಗುಂಟೆ ಜಮೀನು ಇದೆ. ಸದರಿ ಜಮೀನು ನನಗೆ ನನ್ನ ಹಿರಿಯರಿಂದ ಬಂದಂತಹ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಅಸುಂಡಿ ಗ್ರಾಮದಲ್ಲಿ ದಾವಾ ಶೆಡ್ಯೂಲ್-ಬಿ, ಕ್ರಮ ಸಂಖ್ಯೆ1, 2, 4 ಮತ್ತು 5 ನೇ ಆಸ್ತಿಗಳು ನನಗೆ ಹಿರಿಯರಿಂದ ಬಂದಂತಹ ಆಸ್ತಿಗಳಾಗಿದ್ದು, ಅವು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಶೆಡ್ಯೂಲ್-ಬಿ, ಕ್ರಮ ಸಂಖ್ಯೆ1 ನೇ ಆಸ್ತಿ ಖುಷ್ಕಿ ಜಮೀನು ಎಂದರೆ ಸಾಕ್ಷಿ ಇಲ್ಲ ಬೋರವೆಲ್ ಇದೆ ಅಂತಾ ನುಡಿಯುತ್ತಾರೆ. ಮೊದಲು ಕೆರೆಯ ನೀರು ಹರಿಯುತ್ತಿದ್ದು, ಈಗ 12 ವರ್ಷಗಳ ಹಿಂದೆ ಬೋರವೆಲ್ ಹಾಕಿಸಿರುತ್ತೇವೆ. ನನಗೆ ಕ್ರಮ ಸಂಖ್ಯೆ 1 ಮತ್ತು 2 ನೇ ಆಸ್ತಿಯ ಆದಾಯ ಬಿಟ್ಟು ಬೇರೆ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ಬೇರೆಯವರ ಜಮೀನುಗಳನ್ನೂ ಸಹಾ ಕೋರ ಪಾಲಿನ ಮೇಲೆ ಎತ್ತುಗಳನ್ನು ಇಟ್ಟುಕೊಂಡು ಕಮತ ಮಾಡುತ್ತಿದ್ದೆ ಅಂತಾ ನುಡಿಯುತ್ತಾರೆ. ನಾನು ಭರಮಪ್ಪ ನಾಗಣ್ಣನವರ ಮತ್ತು ಗೌಡ್ರ ಜಮೀನನ್ನು, ಕೋರ ಪಾಲಿನಿಂದ ಮಾಡುತ್ತಿದ್ದೆ, ಈಗ ಅವರೆಲ್ಲರೂ ತೀರಿಕೊಂಡಿರುತ್ತಾರೆ. ನಾನು ಬೇರೆಯವರ ಜಮೀನನ್ನು ಕೋರ ಪಾಲಿನಿಂದ ಮಾಡುತ್ತಿರಲಿಲ್ಲ, ಕೇವಲ ನನ್ನ

ಖುಷ್ಕಿ ಜಮೀನಿನಲ್ಲಿ ಮಾತ್ರ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಕೋರ ಪಾಲಿನ ಬಗ್ಗೆ ಲಾವಣಿ ಪತ್ರಗಳು ಇಲ್ಲ. ನನಗೆ ಕ್ರಮ ಸಂಖ್ಯೆ 1 ಮತ್ತು 2 ನೇ ಆಸ್ತಿಯ ಉತ್ಪನ್ನ ಬಿಟ್ಟು ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 1 ಮತ್ತು 2 ನೇ ಆಸ್ತಿಗಳಿಂದ ಎಷ್ಟು ಉತ್ಪನ್ನ ಬರುತ್ತಿತ್ತು ಅಂತಾ ನನಗೆ ಹೇಳಲು ಬರುವುದಿಲ್ಲ ಮತ್ತು ಆ ಬಗ್ಗೆ ನನ್ನ ಬಳಿ ದಾಖಲಾತಿಗಳು ಇಲ್ಲ.

4. ನಮ್ಮ ಮನೆಯಲ್ಲಿ ಆರ್ಥಿಕ ಸಂಕಷ್ಟ ಇತ್ತು, ಇದರಿಂದ 4 ನೇ ಪ್ರತಿವಾದಿ ಡಿಪ್ಲೋಮಾ ಮುಗಿಸಿಕೊಂಡು ನೌಕರಿಗೆ ಸೇರಿ ಪ್ರತ್ಯೇಕವಾಗಿಯೇ ವಾಸವಾಗಿದ್ದರು ಎಂದರೆ ಸಾಕ್ಷಿ ಕಷ್ಟ ಇತ್ತು, ಆದರೆ 4 ನೇ ಪ್ರತಿವಾದಿ ಬಂದು ಹೋಗಿ ಮಾಡುತ್ತಿದ್ದ ಅಂತಾ ನುಡಿಯುತ್ತಾರೆ. ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಮಾರಾಟ ಮಾಡುವುದು ಹಾಗೂ ಅದರಿಂದ ಬಂದ ಆದಾಯದಿಂದ ಮನೆ ಸಾಮಾನುಗಳನ್ನು ತರುವ ಕೆಲಸವನ್ನು ನಾನೇ ಮಾಡುತ್ತಿದ್ದೆ ಎಂದರೆ ಸಾಕ್ಷಿ ನಾನು ಮತ್ತು 5 ನೇ ಪ್ರತಿವಾದಿ ಮಾಡುತ್ತಿದ್ದೇವು ಅಂತಾ ನುಡಿಯುತ್ತಾರೆ.

**ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.